ಇ) ಸದರೀ ಶಿಕ್ಷಕರುಗಳಲ್ಲಿ ಎಷ್ಟು ಶಿಕ್ಷಕರುಗಳು ಸಹ ಶಿಕ್ಷಕರಾಗಿ ಬಡ್ತಿ ಪಡೆಯಲು ಅರ್ಹರಾಗಿರುತ್ತಾರೆ. ಇದುವರೆವಿಗೂ ಅರ್ಹರಾಗಿರುವ ಶಿಕ್ಷಕರುಗಳಿಗೆ ಬಡ್ತಿ ನೀಡದಿರಲು ಕಾರಣವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) :

ಅ) 3921.

ಆ) 1. ದೈಹಿಕ 2. ಹೊಲಿಗೆ, ತೋಟಗಾರಿಕೆ ಮರಗೆಲಸ 3. ಚಿತ್ರಕಲಾ 4. ನೃತ್ಯ ನಾಟಕ ಮತ್ತು ಸಂಗೀತ.

ಇ) ಹುದ್ದೆ ಮತ್ತು ನೇಮಕಾತಿ ನಿಯಮದಲ್ಲಿ ವಿಶೇಷ ಶಿಕ್ಷಕರಿಗೆ ಸಹ ಶಿಕ್ಷಕರಾಗಿ ಮುಂಬಡ್ತಿ ನೀಡಲು ಅವಕಾಶ ಇರುವುದಿಲ್ಲ.

ಶ್ರೀಮತಿ ಮೋಟಮ್ಮ : ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಯಲ್ಲಿ ರಾಜ್ಯದಲ್ಲಿರುವ ಪ್ರೌಢಶಾಲೆಗಳಲ್ಲಿ ಒಟ್ಟು ವಿಶೇಷ ಶಿಕ್ಷಕರುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 3921 ಎಂದು ಮಾನ್ಯ ಶಿಕ್ಷಣ ಸಚಿವರು ಉತ್ತರ ಹೇಳಿದ್ದಾರೆ, ಎರಡನೆಯ ಪ್ರಶ್ನೆಯಲ್ಲಿ ಸದರಿ ಶಿಕ್ಷಕರು ಯಾವ ಯಾವ ವಿಷಯಗಳಲ್ಲಿ ಪರಿಣತಿ ಹೊಂದಿರುತ್ತಾರೆ ಎಂದು ಕೇಳಿದ್ದಕ್ಕೆ ಉತ್ತರ. ದೈಹಿಕ, ಹೊಲಿಗೆ, ತೋಟಗಾರಿಕೆ, ಮರಗೆಲಸ, ಚಿತ್ರಕಲಾ, ನೃತ್ಯ, ನಾಟಕ ಮತ್ತು ಸಂಗೀತ ಎಂದು ಹೇಳಿದ್ದಾರೆ. ಇನ್ನು ಕೊನೆಯ ಪ್ರಶ್ನೆಯಲ್ಲಿ ಸದರಿ ಶಿಕ್ಷಕರುಗಳಲ್ಲಿ ಸಹ ಶಿಕ್ಷಕರಾಗಿ ಬಡ್ತಿ ಪಡೆಯಲು ಅರ್ಹರಾಗಿರುತ್ತಾರೆ. ಇದುವರೆವಿಗೂ ಅರ್ಹರಾಗಿರುವ ಶಿಕ್ಷಕರುಗಳಿಗೆ ಬಡ್ತಿ ನೀಡದಿರಲು ಕಾರಣವೇನು ಎಂದು ಕೇಳಿದ್ದಕ್ಕೆ ಹುದ್ದೆ ಮತ್ತು ನೇಮಕಾತಿ ನಿಯಮದಲ್ಲಿ ವಿಶೇಷ ಶಿಕ್ಷಕರಿಗೆ ಸಹ ಶಿಕ್ಷಕರಾಗಿ ಮುಂಬಡ್ತಿ ನೀಡಲು ಅವಕಾಶ ಇರುವುದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ, ಇವರು ಅಪಾಯಿಂಟ್‌ಮೆಂಟ್‌ಗೆ ಕ್ರಾಫ್ಟ್ ಟೀಚರ್ ಆಗಿ, ಫಿಸಿಕಲ್ ಎಜುಕೇಷನ್ ಟೀಚರ್ ಆಗಿ ಸೇರಿದವರು ಹಾಗೆಯೇ ರಿಟೈರ್ ಆಗಬೇಕಾಗುತ್ತದೆ. ಇವರಲ್ಲಿ ಕೆಲವರು ಬಿ.ಎಡ್. ಮಾಡಿದವರು ಇರುತ್ತಾರೆ. ಇವರಿಗೆ ಪ್ರಮೋಷನ್ ವಿತಕ್ಕೆ ಕೊಡಬಾರದು? ಒಂದುವೇಳೆ ಹಾಗೆ ಪ್ರಮೋಷನ್ ಸಾಧ್ಯವಿಲ್ಲದೇ ಇದ್ದಾಗ ಆ ಹುದ್ದೆಯನ್ನೇ ಏಕೆ ಅಪ್‌ಗ್ರೇಡ್ ಮಾಡಬಾರದು? ಈ ರೀತಿ ಮಾಡಿದರೆ ಅವರಿಗೆ ಹೆಚ್ಚಿನ ಸಹಾಯವಾಗುತ್ತದೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಇರತಕ್ಕ ನೇಮಕಾತಿ ನಿಯಮಗಳಲ್ಲಿ ಸಹ ಶಿಕ್ಷಕರು ಆಗಲಿಕ್ಕೆ ಶಿಕ್ಷಕರಾಗಿ ಮುಂಬಡ್ತಿ ಅವಕಾಶ ಇರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ವಿಶೇಷ ಶಿಕ್ಷಕರು ಯಾರು ಇದ್ದಾರೆ ಅವರು ಅಮೇಲೆ ಅವರಿಗೆ ಬೇಕಾದಂಥ ಅರ್ಹತೆಗಳನ್ನು ಪಡೆದಿದ್ದರೆ, ಅವರಿಗೆ ವಿತಕ್ಕೆ ಮುಂಬಡ್ತಿ ಕೊಡಬಾರದು ಎಂದು ಪ್ರಶ್ನೆ ಕೇಳಿದಿರಿ. ಅದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದನ್ನು ನಾವು ಸರ್ಕಾರ ಪರಿಶೀಲನೆ ಮಾಡುತ್ತೇವೆ. ಈಗಾಗಲೇ 15 ವರ್ಷ ಆದಮೇಲೆ ಒಂದು ಮುಂಬಡ್ತಿ ಕೊಡಬೇಕೆಂದು ಮೊನ್ನೆತಾನೆ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಇವರಿಗೂ ಕೂಡ ಅನ್ವಯವಾಗುತ್ತದೆ. ಇನ್ನು ವಿಶೇಷವಾಗಿ ಕೊಡತಕ್ಕಂಥ ಮುಂಬಡ್ತಿಯಲ್ಲಿ ಈಗಿನ ನೇಮಕಾತಿಗೆ ಅವಕಾಶ ಇಲ್ಲ. ಅರ್ಹತೆಯನ್ನು ಆಮೇಲೆ ಪಡೆದುಕೊಂಡರೆ ಆಮೇಲೆ ಮುಂಬಡ್ತಿ ಕೊಡತಕ್ಕಂಥ ವಿಚಾರದಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತದೆ.

ತುಮಕೂರಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಶಾಖೆಯೊಂದನ್ನು ತೆರೆಯುವುದು

282 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) :ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ತುಮಕೂರು ಜಿಲ್ಲೆಯಲ್ಲಿರುವ ಎಲ್ಲಾ ಕಾಲೇಜುಗಳು ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರ್ಪಡೆಯಾಗಿದೆಯೇ?*
2. *ಇಲ್ಲದಿದ್ದರೆ ತುಮಕೂರು ಜಿಲ್ಲೆಯಲ್ಲಿರುವ ಎಷ್ಟು ಕಾಲೇಜುಗಳು ಬೆಂಗಳೂರು ವಿಶ್ವ ವಿದ್ಯಾಲಯದ ವ್ಯಾಪ್ತಿಗೆ ಸೇರ್ಪಡೆಯಾಗಿದೆ?*
3. *ಬೆಂಗಳೂರು ವಿಶ್ವವಿದ್ಯಾಲಯವು ಸುಗಮವಾಗಿ ಆಡಳಿತ ನಡೆಸಲು ತುಮಕೂರಿನಲ್ಲೇನಾದರೂ ತನ್ನ ಉಪ ಕಛೇರಿಯನ್ನೇನಾದರೂ ಪ್ರಾರಂಭಿಸಿದೆಯೇ?*
4. *ತುಮಕೂರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಉಪ ಕಛೇರಿ ಇಲ್ಲದಿದ್ದರೆ ಸರ್ಕಾರವು ತುಮಕೂರಿನಲ್ಲಿ ವಿಶ್ವವಿದ್ಯಾಲಯದ ಉಪ ಕಛೇರಿಯನ್ನು ತುಮಕೂರು ಜಿಲ್ಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಮಾಹಿತಿಗಾಗಿ ಬೆಂಗಳೂರಿಗೆ ಎಂದು ತಿಳಿದುಕೊಳ್ಳುವ ಬದಲು ಅಲ್ಲೇ ತಿಳಿದುಕೊಳ್ಳುವಂತೆ ಉಪ ಕಛೇರಿ ಪ್ರಾರಂಭ ಮಾಡಲು ಏನಾದರೂ ಸೂಕ್ತ ಕ್ರಮ ಕೈಗೊಳ್ಳುವುದೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :

1. ಹೌದು.

2. ಈ ಪ್ರಶ್ನೆ ಉದ್ಭವಿಸುವುದಿಲ್ಲ.

3. ಇಲ್ಲ.

4. ಇದಕ್ಕೆ ಯಾವುದೇ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದಿಲ್ಲ.

ಶ್ರೀ ಕೆ. ಲಕ್ಕಪ್ಪ : ಮಾನ್ಯ ಅಧ್ಯಕ್ಷರೆ, ನನ್ನ 2ನೇ ಪ್ರಶ್ನೆಗೆ "ಉದ್ಭವಿಸುವುದಿಲ್ಲ" ಎಂದು ಮಂತ್ರಿಗಳು ಉತ್ತರ ಹೇಳಿದ್ದಾರೆ. ತುಮಕೂರು ಜಿಲ್ಲೆ ಸುಮಾರು 3 ಇಂಜಿನಿಯರಿಂಗ್ ಕಾಲೇಜು, 1 ಮೆಡಿಕಲ್ ಕಾಲೇಜು, 1 ಫಾರ್ಮಸಿ ಕಾಲೇಜು, 4 ಎಜುಕೇಷನ್ ಕಾಲೇಜು, 17 ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು, 1 ಲಾ ಕಾಲೇಜು, ಇಷ್ಟು ವಿದ್ಯಾ ಸಂಸ್ಥೆಗಳ ಕೇಂದ್ರವಾಗಿದೆ. ಈ ಕೇಂದ್ರದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಯಾವುದೇ ಕಾರ್ಯಕ್ರಮವಾಗಲಿ, ಆಡಳಿತವನ್ನು, ವ್ಯವಹಾರವನ್ನು ನಡೆಸಬೇಕಾಗಲಿ ಬೆಂಗಳೂರಿಗೇ ಬರಬೇಕಾಗುತ್ತದೆ. ಜೊತೆಗೆ ಇಷ್ಟೆಲ್ಲಾ ವಿದ್ಯಾ ಸಂಸ್ಥೆಗಳು ಇರತಕ್ಕ ತುಮಕೂರಿಗೆ ಒಂದು ಪೋಸ್ಟ್ ಗ್ರಾಜ್ಯುಯೇಷನ್ ಸೆಂಟರ್ ಕೂಡ ಇಲ್ಲ. ಇದಕ್ಕೆ ಪ್ರಪೋಸಲ್‌ನ್ನು ಕಳುಹಿಸಿಲ್ಲವೆಂದು ತಾವು ಹೇಳುತ್ತಿದ್ದೀರಿ. ಈಗ ನಾನು ತಮಗೆ ಪ್ರಪೋಸಲ್ ಸಬ್‌ಮಿಟ್ ಮಾಡುತ್ತಿದ್ದೇನೆ. ತುಮಕೂರಿನಲ್ಲಿ ಒಂದು ಪೋಸ್ಟ್ ಗ್ರ್ಯಾಜುಯೇಷನ್ ಸೆಂಟರ್‌ನ್ನು ಮಾಡಬೇಕು. ಈ ಕೆಲಸವನ್ನು ಸರ್ಕಾರ ಎಷ್ಟು ದಿವಸಗಳಲ್ಲಿ ಪ್ರಪೋಸಲ್‌ನ್ನು ಕಳುಹಿಸಿ ಈ ವಿದ್ಯಾ ಸಂಸ್ಥೆಗಳು ಬೆಳೆಯತಕ್ಕ ತುಮಕೂರಿಗೆ ಯೂನಿವರ್ಸಿಟಿ ಆಡಳಿತದಲ್ಲಿ ನಡೆಯತಕ್ಕ ವಿಳಂಬವನ್ನು ತಪ್ಪಿಸುವುದಕ್ಕೆ ಒಂದು ಸೆಂಟರ್ ಮತ್ತು ಪೋಸ್ಟ್ ಗ್ರಾಜ್ಯುಯೇಟ್ ಸೆಂಟರ್‌ನ್ನು ತೆರೆಯುತ್ತೀರೆಂದು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಬೆಂಗಳೂರು ವಿಶ್ವವಿದ್ಯಾನಿಲಯ ಬಹುಶಃ ಇಡೀ ಕರ್ನಾಟಕ ರಾಜ್ಯದಲ್ಲೇ ಅತಿ ದೊಡ್ಡ ವಿಶ್ವವಿದ್ಯಾನಿಲಯವಾಗಿ ಬೆಳೆದಿದೆ. ಸುಮಾರು 700 ಕಾಲೇಜುಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ತಾವು ಹೇಳಿದಂತೆ ತುಮಕೂರಿನಲ್ಲಿ ಪೋಸ್ಟ್ ಗ್ರಾಜ್ಯುಯೇಟ್ ಸೆಂಟರ್ ಪ್ರಾರಂಭ ಮಾಡುವ ಬಗ್ಗೆ ಅವರ ಪ್ರಸ್ತಾವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ಸೆನೆಟ್ ಮುಂದೆ ಬಂದು ಅಲ್ಲಿಂದ ಸರ್ಕಾರಕ್ಕೆ ಬರಬೇಕು. ಅದು ಸರ್ಕಾರಕ್ಕೆ ಬಂದನಂತರ ಸರ್ಕಾರದವರು ಅದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ, ಅವರು ಸೆನೆಟ್ ಮತ್ತು ಸಿಂಡಿಕೇಟ್ ಮುಂದಿಟ್ಟು ಎಲ್ಲಿ ಇಂಥ ಒಂದು ಪಿ.ಜಿ. ಸೆಂಟರ್‌ನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ

ಬರತಕ್ಕ ಜಿಲ್ಲೆಯಲ್ಲಿ ಮಾಡಲಿಕ್ಕೆ ಯೋಗ್ಯವಾಗಿದೆ ಎಂಬುದನ್ನು ಪರಿಶೀಲಿಸಿ ವರದಿ ಕೊಡುವಂತೆ ಅವರಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ. ಅನಂತರ ಸರ್ಕಾರ ಒಂದು ನಿರ್ಣಯವನ್ನು ಅದರ ಬಗ್ಗೆ ತೆಗೆದುಕೊಳ್ಳುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿಯಿರುವ ಮುಖ್ಯೋಪಾಧ್ಯಾಯರುಗಳ ಹುದ್ದೆಗಳು

1127 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಕಿರಿಯ ಮಹಾವಿದ್ಯಾಲಯ, ಪದವಿ ಮಹಾವಿದ್ಯಾಲಯಗಳ ಅಧ್ಯಾಪಕರ ಉಪನ್ಯಾಸಕರ ಸ್ಥಾನ ಎಷ್ಟು ಖಾಲಿ ಇವೆ?

ಆ) ಮುಖ್ಯೋಪಾಧ್ಯಾಯರು ಪ್ರಾಂಶುಪಾಲರ ಸ್ಥಾನ ಎಷ್ಟು ಖಾಲಿ ಇದೆ?

ಇ) ಮಂಜೂರಾದ ಹುದ್ದೆಗಿಂತಲೂ ಜಾಸ್ತಿ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹೆಚ್ಚಿನ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಿಕ್ಷಕರು 427

ಪ್ರೌಢಶಾಲೆ ಶಿಕ್ಷಕರು 223

ಕಿರಿಯ ಕಾಲೇಜು ಉಪನ್ಯಾಸಕರು 87

ಕಾಲೇಜು ಉಪನ್ಯಾಸಕರು 1

ಆ) ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು 42

ಕಿರಿಯ ಕಾಲೇಜು ಪ್ರಾಂಶುಪಾಲರು 8

ಇ) ಬಂದಿದೆ.

ಈ) ರಾಜ್ಯದಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳ ಹೆಚ್ಚಿನ ಹುದ್ದೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಜಿ.ಎಸ್. ಆಚಾರ್: ಮಾನ್ಯ ಅಧ್ಯಕ್ಷರೆ, ಹಿಂದೆ ಒಂದು ಕಾಲಕ್ಕೆ ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ರಂಗದಲ್ಲಿ ಪ್ರಥಮ ಶ್ರೇಣಿಯಲ್ಲಿದ್ದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಖಾಲಿ ಹುದ್ದೆಗಳನ್ನು ತುಂಬದೆ, ಅವಶ್ಯಕವಾಗಿ ಬೇಕಾದಂಥ ಹುದ್ದೆಗಳನ್ನು ಮಂಜೂರು ಮಾಡದೆ ಇರುವ ಕಾರಣದಿಂದಾಗಿ ಈಗ 788 ಹುದ್ದೆಗಳು ಖಾಲಿ ಇವೆ. ಇದು ಹಿಂದಿನ ಮಂಜೂರಾತಿಯ ಪ್ರಕಾರ. ಈ 788 ಸ್ಥಾನಗಳನ್ನು ಭರ್ತಿ ಮಾಡಲಿಕ್ಕೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಇದರಲ್ಲಿ ಫಸ್ಟ್ ಗ್ರೇಡ್ ಕಾಲೇಜುಗಳು ಪ್ರಿನ್ಸಿಪಾಲರ ಹುದ್ದೆಗಳು ಬಿಟ್ಟು ಹೋಗಿವೆ. ಇದನ್ನೂ ಸೇರಿಸಿದರೆ ಸುಮಾರು 800 ಹುದ್ದೆಗಳಾಗಬಹುದು. ಇಷ್ಟನ್ನೂ ಭರ್ತಿಮಾಡಲು ಯಾವಾಗ ಕ್ರಮ ತಗೆದುಕೊಳ್ಳುತ್ತೀರಿ? ಹಿಂದಿನ ಅವಶ್ಯಕತೆಯ ಆಧಾರದಮೇಲೆ ಭರ್ತಿ ಮಾಡುವುದು ಅಲ್ಲದೆ ಇವತ್ತಿನ ಅವಶ್ಯಕತೆಯ ಪ್ರಕಾರ ಟೀಚರ್-ಪೀಪಲ್ ರೇಷಿಯೋ ಪ್ರಕಾರ ಅಗತ್ಯ ಇರತಕ್ಕ ಸ್ಥಾನಗಳನ್ನು ಭರ್ತಿ ಮಾಡುತ್ತೀರಾ? ಮಾನ್ಯ ಶಿಕ್ಷಣ ಮಂತ್ರಿಗಳು ದಕ್ಷಿಣ ಕನ್ನಡದವರೇ ಆಗಿದ್ದು ಅವರು ಇಡೀ ಕರ್ನಾಟಕ ರಾಜ್ಯವನ್ನೇ ನೋಡಿಕೊಳ್ಳುವ ಜವಾಬ್ದಾರಿ ಇದ್ದರೂ ಸಹ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಾನಮಾನಕ್ಕೆ ಭಂಗ ಬಾರದಂತೆ ಹಿಂದಿನ ಮೇಲ್ಪಾಲು ಯಾವುದು ಇದೆ ಅದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾರೆಯೆ? ಎಂಬುದನ್ನು ಕೇಳಬಯಸುತ್ತೇನೆ.